THE KARNATAKA ENTERTAINMENTS TAX (SECOND AMENDMENT) BILL, 1983.

Motion to Consider

SRI RAMAKRISHNA HEGDE (Chief Minister).—Sir, I move that.

"The Karnataka Entertainments Tax (Second Amendment) Bill. 1983 be taken into consideration."

The question was proposed

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇದು ಒಂದು ಚಿಕ್ಕ ತಿದ್ದುಪಡಿ ಮಸೂದೆ ಇದೆ ಕೆಲವು ಕಲಮುಗಳನ್ನು ಈಗಿರತಕ್ಕದ್ದರಲ್ಲಿ ಸ್ವಲ್ಪ ಲಿಬರಲೈಸ್ ಮಾಡಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತರಲಾಗಿದೆ. ಈಗಿರತಕ್ಕ ಕಾನೂನಿನಿಂದ ಎಂತಹ ಉತ್ತಮವಾದ ಚಿತ್ರವೇ ಬರಲಿ ಅದಕ್ಕೆ ಮನರಂಜನಾ ತೆರಿಗೆಯನ್ನು ಎಕ್ಸಮ್ಪ್ಟ್ ಮಾಡತಕ್ಕ ಅಧಿಕಾರ ಇಲ್ಲ. ಉದಾಹರಣೆಗೆ ಮೊನ್ನೆ ''ಗಾಂಧಿ'' ಚಿತ್ರ ನಮ್ಮಲ್ಲಿ ಪ್ರದರ್ಶನಕ್ಕೆ ಬಂತು. ಅದು ಅಂತರರಾಷ್ಟ್ರೀಯ ಆಸ್ಕರ್ ಪ್ರಶಸ್ತಿಯನ್ನು ಪಡೆದಂತಹ ಮಹತ್ವದ ಚಿತ್ರ. ಇದು ಇಡೀ ಪ್ರಪಂಚದಲ್ಲಿಯೇ ಹೆಸರು ಗಳಿಸಿದೆ. ಇಂತಹ ಒಂದು ಉತ್ತಮ ಚಿತ್ರಕ್ಕೂ ನಾವು ಮೂರು ವಾರಕ್ಕಿಂತ ಹೆಚ್ಚು ಮನರಂಜನಾ ತೆರಿಗೆ ವಿನಾಯಿತಿ ಮಾಡತಕ್ಕ ಅಧಿಕಾರ ಇರಲಿಲ್ಲ. ಈ ವಿಚಾರದಲ್ಲಿ ಸ್ವಲ್ಪ ಲಿಬರಲೈಸ್ ಮಾಡಬೇಕೆನ್ನುವುದು ಮೊದಲನೆಯದು. ಎರಡನೆಯದಾಗಿ ಈಗ ವೀಡಿಯೋ ಪ್ರದರ್ಶನಗಳು ಮನೆಯಲ್ಲಿ ಆಲ್ಲದೆ ಸಾರ್ವಜನಿಕ ಸ್ಥಳಗಳಲ್ಲೂ ಪ್ರದರ್ಶನ ಆಗುತ್ತಿದೆ. ಕೆಲವು ಜನರು ವೀಡಿಯೋ ಇಟ್ಟುಕೊಂಡು ಸಾರ್ವಜನಿಕರಿಂದ ಹಣ ಪಡೆದುಕೊಂಡು ಆದನ್ನು ತೋರಿಸುತ್ತಿದ್ದಾರೆ. ಆದನ್ನು ತಪ್ಪು ಎಂದು ನಾನು ಹೇಳುವುದಿಲ್ಲ ಕೆಲವು ಕಡೆ, ಆದರಲ್ಲೂ ಮುಖ್ಯವಾಗಿ ಗುಲ್ಬರ್ಗ ಮತ್ತು ಬಿಜಾಪುರ ಮೊದಲಾದ ಸ್ಥಳಗಳಲ್ಲಿ ರೆಗ್ಯುಲರ್ ಆಗಿ ಇದಕ್ಕೆ ಟಿಕೆಟ್ ಇಷ್ಟೂ ಮಾಡುತ್ತಿದ್ದಾರೆ. ಮತ್ತು ಮನರಂಜನಾ ತೆರಿಗೆ ಅಧಿಕಾರಿಗಳ ಪತ್ತಿರ ಕೋಟ ಟಿಕೆಟ್‌ಗಳಿಗೆ ಸ್ಟಾಂಪ್ ಹಾಕಿಸಿಕೊಳ್ಳುತ್ತಾರೆ. ಆದರಲ್ಲಿ ೧ ರೂಪಾಯಿಯಲ್ಲಿ ೨೫ ಪೈಸೆಯಷ್ಟು ಸರ್ಕಾರಕ್ಕೆ ಬರುತ್ತದೆ. ಆದ್ದರಿಂದ ಈ ರೀತಿಯ ಚಿಕ್ಕ ಪ್ರದರ್ಶನಗಳಿಗೂ ಟಿಕೆಟ್ ಕೊಟ್ಟು ಸ್ಟಾಂಪ್ ಹಾಕಿಸಿಕೊಳ್ಳುವುದು ಸರಿಯಲ್ಲವೆಂದು, ಒಂದು ತಿಂಗಳಿಗೆ ಇಷ್ಟು ಹಣವನ್ನು ಕಟ್ಟಬೇಕೆಂದು ಮಾಡಿದರೆ ಆವರಿಗೂ ಅನುಕೂಲ ಮತ್ತು ಯಾವುದೇ ರೀತಿಯ ತೊಂದರೆಯಾಗಲೀ ಕಷ್ಟವಾಗಲೀ ಆಗುವುದಿಲ್ಲ ವೆನ್ನುವ ಈ ಎರಡು ಮುಖ್ಯ ತಿದ್ದುಪಡಿಯನ್ನು ತಂದಿದ್ದೇವೆ. ಆದ್ದರಿಂದ ಸದನ ಈ ತಿದ್ದುಪಡಿಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕ ಈ ತಿದ್ದುಪಡಿ ಮಸೂದೆ ಬಗ್ಗೆ ನಾನು ಎರಡು ವಿಷಯಗಳನ್ನು ಹೇಳಬೇಕಾಗುತ್ತದೆ, ಮೊದಲನೆಯದು ಎಂದರೆ ಮನರಂಜನಾ ತೆರಿಗೆಗೆ ಸಂಬಂಧಪಟ್ಟಿದ್ದಾಗಿದೆ. ಈ ದಿನ ನಮ್ಮ ಜನರಿಗೆ ಮನರಂಜನೆ ಕೊಡುವ ಸಾಧನ ಸಿನಿಮಾ ಆಗಿದೆ. ಸಿನಿಮಾ ತೋರಿಸುವಾಗ ತೆರಿಗೆಯನ್ನು ವಸೂಲು ಮಾಡಲಾಗುತ್ತದೆ. ಈ ದಿನ ಏನು ಒಳ್ಳೆಯ ಟೀಚಿಂಗ್ ಫಿಲಮ್ಸ್ ಹಾಗೂ ಮಕ್ಕಳ ಚಿತ್ರಗಳು ಎನಿವೆ ಅವುಗಳಿಗೆ ಮನರಂಜನೆ ತೆರಿಗೆಯಲ್ಲಿ ವಿನಾಯಿತಿ ಕೊಡುವುದು ಆಷ್ಟೇ ಈ ತಿದ್ದುಪಡಿಯಲ್ಲಿ ಇದ್ದರೆ ಇದನ್ನು ನಾನು ನೇರವಾಗಿ ಒಪ್ಪಿಕೊಳ್ಳುತ್ತಿದ್ದೆ. ಆದರೆ ಇಲ್ಲಿ ನನಗೆ ಏನು ಕಾಣಿಸುತ್ತಿದೆಯೆಂದರೆ, ಸ್ವಲ್ಪ ಮಂಟಿಗೆ ತೆರಿಗೆಯನ್ನು ಸಹಾ ಜಾಸ್ತಿ ಮಾಡುವ ಸನ್ನಿವೇಶ ಬರಬಹುದೆನ್ನುವ ಅನುಮಾನ ಇದೆ. ಆ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ನಮ್ಮ ನಗರದ ಜನರಿಗೆ ಮನರಂಜನೆ ಎಂದರೆ ಸಿನೆಮಾ ಮಾತ್ರ. ಬಡ ಜನರು, ಕಾರ್ಮಿಕರು ಯಾರು ಹೆಚ್ಚು ಸಂಖ್ಯೆಯಲ್ಲಿದ್ದಾರೆ ಅವರು ಸಿನೆಮಾ ನೋಡಲು ಹೋಗುತ್ತಾರೆ. ಮತ್ತೆ ಹಿಂದೆ ಏನು ಸಿನೆಮಾ ದರ ೧ ರೂಪಾಯಿ ಇತ್ತು ಅದು ಇವತ್ತು ರೂ. ೨.೫೦ ಆಗಿದೆ. ಇದಕ್ಕೆ ಕಾರಣ ನಾವು ಮನರಂಜನಾ ತೆರಿಗೆಯನ್ನು ಏರಿಸುತ್ತಿರುವುದೇ ಆಗಿದೆ. ಇದು ಜಾಸ್ತಿಯಾದಾಗ ಪರೋಕ್ಷವಾಗಿ ಈ ತೆರಿಗೆ ಈ ಬಡ, ಕಾರ್ಮಿಕವರ್ಗದವರ ಮೇಲೆ ಬೀಳುತ್ತದೆ. ಆದರೆ ಇದು ಸಾಮಾನ್ಯ ಸಾಹುಕಾರ ವರ್ಗದವರ ಮೇಲೆ ಬೀಳುವುದಿಲ್ಲ. ಆದ್ದರಿಂದ ಈ ಒಂದು

ತೆರಿಗೆ ತಪ್ಪಿಸಿಕೊಳ್ಳುವುದು ಸರಿಯಲ್ಲ. ನೀವು ಏನೂ ಮಾಡದೇ ಹೋದರೂ ನ್ಯಾಯ ಸಿಗುವುದಿಲ್ಲ. ಇನ್ನು ಎರಡು—ಮೂರು ಕ್ಲಾಸ್‌ಗಳ ಬಗ್ಗೆ ವಿವರಣೆಯನ್ನು ನಾನು ಕೇಳಬೇಕಾಗುತ್ತದೆ. ಒಂದನೆಯದು ಏಂದರೆ ಡೆಫನೇಷನ್‌ನಲ್ಲಿ ಏಂದನ್ನು ತಾವು ಸೇರಿದ್ದೀರಿ.

"any payment for admission of a motor vehicle into the auditorium of a cinema known as drive-in-theatre."

ಏಂದಿದ್ದೀರಿ. ಈ ಏಂದು ಸಿನೆಮಾ ಮಂದಿರ ಬೆಂಗಳೂರು ಹೊರಗಡೆ ಇದೆ ಆದರೆ ಈಗಾಗಲೇ ಇಲ್ಲಿ ಕೊಡಬೇಕಾಗಿರುವ ಟಿಕೆಟ್ ಬೆಲೆಯೇ ಜಾಸ್ತಿ ಇದೆ. ಇದರ ಮೇಲೆ ಮೋಟಾರ್ ಕಾರು ಮೇಲೆ ಹೋಗುವವರಿಗೆ ಎಕ್ಸ್‌ಟ್ರಾ ಕೊಡಬೇಕೆಂದು ಹೇಳುತ್ತಿದ್ದೀರಿ. ಬೆಂಗಳೂರಿನ ಸಾಮಾನ್ಯ ಜನ ದಿನ ಕಾರು ಮಾಡಿಕೊಂಡು ಸಿನೆಮಾ ನೋಡುವುದಕ್ಕೆ ಹೋಗುವುದಿಲ್ಲ ಇವತ್ತು ಏನು ಕಾರಿನ ಮೇಲೆ ಹೆಚ್ಚು ತೆರಿಗೆ ಹಾಕುತ್ತಿದ್ದೀರಿ ಆದರಲ್ಲಿ ವಿಶೇಷತೆ ಏನಿಲ್ಲ. There is nothing special except that you sit in a car and see. ಕಾರಿನಲ್ಲಿ ಹೋದರೆ, ಅಲ್ಲಿ ನಿಂತು ನೋಡಿದರೆ ಟಿಕೆಟ್ ಕೊಡಬೇಕು. ಕಾರಿನ ಒಳಗೆ ಗಬ್ಬು ವಾಸನೆಯಲ್ಲಿ ಕುಳಿತು ನೋಡುವುದಕ್ಕೆ ಹೆಚ್ಚು ಹಣ ಕೊಡಬೇಕು. ಕಾರಿನಲ್ಲಿ ಕುಳಿತಿದ್ದೀರಲ್ಲ ಆದಕ್ಕೆ ಹೆಚ್ಚು ಕೊಡಿ ಏಂದು ಕೇಳುತ್ತಿದ್ದೀರೇನೋ ಕಾಣುತ್ತದೆ. ಆದಕ್ಕೆ ಈ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಅದನ್ನಾದರೂ ಕಡಿಮೆ ಮಾಡಿ : ಇಲ್ಲ ಇದನ್ನಾದರೂ ಕಡಿಮೆ ಮಾಡಿ. ಇದರಲ್ಲಿ ವ್ಯತ್ಯಾಸ ಕಂಡುಬಂದಿಲ್ಲ.

ಶ್ರೀಮಂತರ ಪರವಾಗಿ ಮಾತನಾಡುತ್ತಿದ್ದೇನೆಂದು ತಿಳಿದುಕೊಂಡರೆ ಈ ಪ್ರಶ್ನೆ ಬರುವುದಿಲ್ಲ. ಮಾಧ್ಯಮಗಳು ಆಗಿ ಯೋಚನೆ ಮಾಡಬೇಕಾಗಿದೆ.

ಇನ್ನು ಅಮೆಂಡ್‌ಮೆಂಟ್ ೩(೩) ಇದು ಬಹಳ ಮುಖ್ಯವಾದುದು. ಇದರಲ್ಲಿ ಮುಖ್ಯಮಂತ್ರಿಗಳು ಹೇಳಿರುವುದಕ್ಕೂ ಮತ್ತು ಇಲ್ಲಿ ಕೊಟ್ಟಿರುವುದಕ್ಕೂ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಇದರಲ್ಲಿ ಏನಾಗಿದೆ ಏಂದರೆ,—

"Original Section 30 says :

"Notwithstanding anything contained in Section 3 and 3A in the case of a cinematograph show of a Kannada, Kodava, Konkani or Tulu Film, the rates of entertainments tax shall be one of the rates specified therein :

Provided that where such film has secured an award granted by the Central Government or State Government no entertainment tax shall be payable for one year from such date as may be specified by the State Government"

According to this proviso an award granted by the Central Government or the State Government for such film—whatever may be the film they are not liable to pay entertainments tax for a period of one year. This is the implication of the original proviso. Now in

amendment--i.e., amendment of section 3C.--you have said "such film has secured after the first day of April, 1981, a best feature film award granted by the Central Government or any State Government or Internationally recognised award notified by the State Government". Here you have sought to introduce the date. Further you have said that best feature film award granted by the Central or State Government, You have not said what is meant by feature film. it may be children's film, it may be social film. Whereas in the original proviso there was no such restriction. Now through this amendment you sought to introduce some restrictions while granting exemption of entertainments tax. I do not know why restriction imposed. In my view instead of such restriction it should have been in addition to the original proviso. If that were be the intention I can understand the position. You grant exemption to all those films which have got State Government award or Internationally recognised awards. Or, else I can approve if you say only internationally recognised films are only granted exemption for a period of six months from such date as may be specified by the State Government. But here you said have such film has secured after the first day of April, 1981, a best feature film award granted by the Central Government or any State Government or internationally recognised...' I would like to know what are those best feature film. So, I suggest in addition to these feature films, which are not specifically mentioned--that can also be granted exemption by amending this clause. Why I am saying this, because it looks all he feature films will get and not others. I think this is not correct.

Secondly, I must also point out in regard to the exemption granted to films other than Kannada, Kodava, Konkani or Tulu for a period or Tulu for a period of six months. Now, as it is--ie., the present position is all Kannada, Kodava, Konkani or Tulu films have exemption of entertainments tax to the exemption of entertainments tax to the extent of one half of the rates specified. Further it is said Provided that where such film has secured an award granted by the Central Government or the State Government no entertainments tax shall be payable for a period of one year from such date as may be specified by the State Government'. Here you have made distinction between this proviso and the present one in the matter of granting tax exemption. Now here there is a new feature of this applies to non-Kannada, non-Kodava, non-Konkani or non-Tulu films --that is the idea with which it has been introduced. Now, I do not know whether we should be so generous and anxious as to give exemption to non-Kannada, non-Konkani, non- Kodava films unless

they are exceptionally good pictures. I justify for having given 100% tax exemption to 'Gandi' film. It is exceptionally good film. unless it is exceptionally good, I do not know you should exempt non-Kannada, non-Kannada films, from payment of entertainments tax for a period of six months. On the other than if it is exceptionally good why it should be for six months it can even be for one year. That is one point. Secondly, why the period of one year has been reduced to six months.

Then, another point which I would like to make here is an amendment of Section 4... Section 4 says : Additional Tax on cinematograph shows :—

> "In the case of cinematograph shows, in addition to the tax and the surcharge leviable under sections 3 or and 3A the tax leviable under section 4-A, there shall be levied and paid to the State Government a tax calculated at the following rates.. ...

They have given a table Here in the amending bill. They have given a table. It says Rate of tax per show—(a) does not exceed two rupees and fifty paise – twenty rupees, exceeds two rupees and fifty paise but does not exceed five rupees. thirty rupees (c) exceeds five rupees fifty rupees' Now you have included another table wherein it says : Where payment or admission does not exceed one rupee and fifty paise -- twenty rupees, (b) exceed one rupee and fifty paise but does not exceed two rupees and fifty paise --thirty rupees (c) exceeds two rupees and fifty paise fifty rupees. So, in the table added here and apart from the old table exists rate of admission seems to be doubled -- that means the people who are paying Rs. 1-50 for them also the rate of tax per show would be Rs. 20. This means-it is a burden on those persons who buy tickets of Rs. 1.50 and Rs. 2.50 which is said to be the lowest level in the cinema houses -- they are being taxed further. I am sure it will definitely affect the cinegoers who mostly go to these classes. Therefore I urge upon the Government to give up the rate of tax per show imposed on these classes and revise the table keeping in view the persons affected by this amendment.

Then, there is also amendment to Section 4-A. In this table also they have changed the serial numbers and entries. It has been decided to collect more tax through this amendment based on the population of a particular place. They have changed the method of collection and definitely this will increase the taxation structure instead of decreasing it.

Here, you have made a special provision in respect of Video shows. This is one welcome feature. Here in the new section 48, you have stated.—

> "**4B. Special provision in respect of Video shows.**—In lieu of the tax payable under sections 3, 3A, 4 or 4A, subject to such rules as may be prescribed, in the case of video shows, there shall be levied and paid to the State Government entertainments tax at the rate of one hundred rupees per month."

Sir, this vido shows are a new phenomenon in our country. I have not yet seen any video show in Bangalore City. I don't know whether the Hon'ble Chief Minister has seen any video shows in Bangalore City.

There is much talk about these video shows. Day before yesterday, there is a talk in the T.V. about the video shows particularly in Bombay City. All types of video shows are there in large numbers. All sorts of films, and even blue films I am told are shown through video shows and they all escape from payment of tax because these shows are arranged in secret rooms. I am told that these are shown in secret rooms of big multi-millionaries or in the Five Star Hotels in confidential manner for some selected people only. This is what I have heard, I don't know whether you consider the video shows as those showing in the buses. Sir, there are so many travel buses which go from Bangalore to Belgaum, or from Bangalore to Mangalore etc., There are good number of luxury buses like Janata Travels and they have got video shows in their buses. If you refer that as video shows, from this Rs. 100 per month may be very low. Even if you refer it to those people who are using it in a very secret manner and in a very confidential manner for their own entertainment and escaping the payment of entertainment tax, then, also, this Rs. 100 is very low.

SRI V. S. ACHARYA.—Those people are there, is it not ?

SRI M. S. KRISHNAN.—The Government must catch hold of those people. They must take the permission and you must also see that the permission given is properly implemented. That is my submission with regard to Video Shows.

Then, Sir, one more point with regard to Amendment of Section 7. Sir, this pertains to exemptions actually. It reads thus.—

> "(1) The State Government may, by order, and subject to such conditions as may be specified therein, grant exemption or reduction, in the rate of entertainments tax payable on

payments for admission to the cinematograph shows of film" Then, Sir, the original language of the clusc reads thus.—

"if the State Government is satisfied (i) that the entire gross proceeds of the entertainment are devoted to philanthrophic, religious or chairtable purposes without any charge on such proceeds for any expenses of the entertainment: or" Now the new clause says.—

"(b) if the State Government is satisfied that the entire gross proceeds of the entertainment after deducting the actual expenses not exceeding fivepercent of such gross proceeds are devoted to philanthrophic, religlous or charitable purposes."

You have mentioned "not exceeding five percent". This is a new thing which you have included. Why should this limitation be there ?

My submission is in the case of every show where the entire proceeds go to the philanthrophic, religious or charitable purpose, then only this exemption should be there. Such a distinction between not exceeding 5% or exceeding 5% should not be there. Supposing it is above 5% then, what does it mean ? Does it not lead to discrimination ? Does it mean that those people who are paying more for such philanthrophic purposes should not be exempted? My own feeling is that such thihgs are probably not envisaged while framing this legislation. Sir, this "not exceeding 5%" is not there in the original Act. I think the original clause itself is perfectly alright and there is no necessity to amend this Clause.

In this legislation, you have mentioned about composition. Where the procedure is very cumbe.some and where the procedure is one of harassment, in such cases, it is necessary that it should be compounded. They pay some amount per month. That I agree. It is welcome feature because harassment will be stopped. Sir, in this connection, I must also point out that in the case of those cinema shows which are shown in tents i.e., in small tents, in small villages ಇಲ್ಲಿ ಟೆಂಪ್‌ಗಳನ್ನು ಹಾಕಿರುವ ಕಡೆಯಿಂದ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಬರುವುದಿಲ್ಲ. ಅದನ್ನು ಭದ್ರ ಪಡಿಸಬೇಕಾಗುತ್ತದೆ ಅಲ್ಲಿ ಕೂಡ ಹಣ ಮಾಡಿಕೊಳ್ಳುವ ಅವಕಾಶ ಇದೆ. ಏನ್ನುವುದು ತಪ್ಪಾಗೂ ಗೊತ್ತಿದೆ. ಟಿಕೆಟ್ ಯಾವ ಪ್ರೋಪೀಜರ್ ಇಶ್ಯು ಮಾಡುತ್ತಾರೆ. ಅದರ ಬಗ್ಗೆ ಅನೇಕ ಸಾರಿ ಕಾಳಜಿ ವಹಿಸಿ ಮಾನ್ಯ ಮಂತ್ರಿಗಳು ಹೇಳಿದ್ದು ಹೇಳಿದ್ದೆ. ಟೆಂಟ್‌ನಿಂದ ಸರ್ಕಾರಕ್ಕೆ ಬರುವ ಟ್ಯಾಕ್ಸ್ ಬಹಳ ಕಡಿಮೆ. ದೊಡ್ಡ, ದೊಡ್ಡ ಚಲನಚಿತ್ರಗಳ ಮುಂದಿರದಿಂದ ಹಣ ಬರುತ್ತದೆ. ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡುವುದು ತಪ್ಪಿ ಹೋಗಿದೆ. ಇಲ್ಲಿ ರಾಜಕಾರಣಿಗಳ ಕೈವಾಡ ಬಹಳ ಇದೆ. ಸಣ್ಣ ಥಿಯೇಟರುಗಳಲ್ಲಿ ಸಣ್ಣ ಸಣ್ಣ ರಾಜಕಾರಣಿಗಳ ಕೈವಾಡ ಇರುತ್ತದೆ. ದೊಡ್ಡ ದೊಡ್ಡ ಥಿಯೇಟರ್‌ಗಳಲ್ಲಿ ದೊಡ್ಡ ದೊಡ್ಡ ರಾಜಕಾರಣಿಗಳ ಕೈವಾಡ ಇರುತ್ತದೆ. ಆದರಲ್ಲಿ ಎಂ.ಎಲ್.ಎ.ಗಳ ಕೈವಾಡ ಕೂಡ ಇರುತ್ತದೆ ಮುದು ಹೇಳಿ, ಅಧ್ಯಕ್ಷರೆ ನಂದಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

† ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ್).—ಸನ್ಮಾನ್ಯ ಅಧ್ಯಕ್ಷರೆ, ಮನರಂಜನೆ ತೆರಿಗೆಗೆ ಸಂಬಧಪಟ್ಟ ಹಾಗೆ ಕೆಲವು ಸೀಮಿತವಾದಂಥ ತಿದ್ದು ಪಡಿಗಳನ್ನು ಮಾತ್ರ ತಂದಿದ್ದಾರೆ. ಮೊದಲನೆಯದು ಪ್ರಶಸ್ತಿ ಪಡೆದಂಥ ಚಿತ್ರಗಳಿಗೆ, ಎರಡನೆಯದು ಮಕ್ಕಳ ಚಿತ್ರಗಳಿಗೆ ಮೂರನೆಯದು ಶೈಕ್ಷಣಿಕ ಚಿತ್ರಗಳಿಗೆ ಕೊಡಲಾಗಿದೆ. ೧೯೫೮ನೇ ಇಸವಿಯಲ್ಲಿ ಇದಕ್ಕೆ ಮನರಂಜನೆ ತೆರಿಗೆ ಎಂದು ಹೆಸರು ಇಟ್ಟರೆ, ಇದಕ್ಕೆ ಆ ರೀತಿ ಹೇಳಲಿಕ್ಕೆ ಆಗುವುದಿಲ್ಲ, ನೂರಕ್ಕೆ ಇರಪತ್ತರಷ್ಟು ಜನರಿಗೆ ಮನರಂಜನೆ ಆಗುವುದು ಮನೆಯೊಳಗೆ, ಹೊರಗಡೆ ಆಗುವುದಿಲ್ಲ ಆದ್ದರಿಂದ, ಮನರಂಜನೆ ತೆರಿಗೆ ಎಂದು ಹೆಸರು ಇಟ್ಟಿರುವುದು ಸರಿಯಲ್ಲ. ಸಿನಿಮಾ ಟೊಗ್ರಫಿ ಟ್ಯಾಕ್ಸ್ ಅಥವಾ ಸಿನಿಮಾ ಶೋಟ್ಯಾಕ್ಸ್ ಎಂದು ಮಾಡಿ. ಇವೊತ್ತು ಚಲನಚಿತ್ರ ಅಂದರೆ, ಯಾವುದೇ ಚಲನಚಿತ್ರ ಕಾಮಿಡಿ ಇದ್ದರೆ ನಗುತ್ತಾ ಬರುತ್ತಾರೆ, ಟ್ರಾಜಿಡಿ ಇದ್ದರೆ ಅಳುತ್ತಾ ಬರುತ್ತಾರೆ, ಅದಕ್ಕೆ ಟ್ಯಾಕ್ಸ್ ಕೊಡುತ್ತಾರೆ

ಶ್ರೀ ಎಂ. ರಘುಪತಿ.—ತಾವು ಪ್ರೊಡ್ಯೂಸ್ ಮಾಡುತ್ತಿರುವ ಸಿನಿಮಾ ಯಾವುದು ?

ಶ್ರೀ ಹೆಚ್. ಗಂಗಾಧರನ್.—ಅದು ಐತಿಹಾಸಿಕ ಇಲ್ಲಿ ಬಹುಶಃ ನಾವು ತೆರಿಗೆ ವಿನಾಯ್ತಿ ಕೊಟ್ಟಿರತಕ್ಕ ಚಿತ್ರಗಳನ್ನು ನೋಡಿದರೆ ಮಕ್ಕಳ ಚಿತ್ರಗಳಿಗೆ ಅತ್ಯಂತ ಬಹಳ ಕಡಿಮೆ. ಶೈಕ್ಷಣಿಕ ಚಿತ್ರಗಳಿಗೂ ಕಡಿಮೆ ಮತ್ತೆ ಪ್ರಶಸ್ತಿ ಚಿತ್ರಗಳಿಗೆ ಕೊಡುತ್ತಿದ್ದಾರೆ ಅದರ ಬಗ್ಗೆ ಏನೂ ಇಲ್ಲ. ಯಾವುದೇ ಚಿತ್ರ ಇರಲಿ ಕೊಡಬೇಕಾಗುತ್ತದೆ. ಇವೊತ್ತು ತೆರಿಗೆ ವಿನಾಯ್ತಿಯಾಗಂತ್ತಿರುವುದು ವ್ಯಕ್ತಿಯ ಪ್ರಭಾವದ ಮೇಲೆ ಎನ್ನುವ ಬಗ್ಗೆ ಅನೇಕ ನಿದರ್ಶನಗಳು ಇವೆ. ಇದಕ್ಕೆ ಸಮಿತಿ ತೀರ್ಮಾನ ಕೊಡುತ್ತದೆಯೋ ಅಥವಾ ಸರ್ಕಾರ ತೀರ್ಮಾನ ಕೊಡುತ್ತಿದ್ದಾರೋ ಎಂದು ಅರ್ಥವಾಗುವುದಿಲ್ಲ. ಸಮಿತಿ ಯಾವುದೋ ಶೈಕ್ಷಣಿಕ ಚಿತ್ರ ಎಂದು ಯಾರೋ ಒಬ್ಬ ಹೆಣ್ಣುಮಗಳನ್ನು ಹೊತ್ತು ಕೊಂಡು ಹೋಗಿ ಅದರಲ್ಲಿ ಜಯಶೀಲರಾದರೆ ಅಂಥದ್ದಕ್ಕೆ ಕೊಟ್ಟರೆ ತಪ್ಪಾಗುತ್ತದೆ. ಆ ತರಹ ನಿದರ್ಶನಗಳು ಇವೆ. ಅದರ ಜೊತೆಗೆ ಈಗಿನ ಚಿತ್ರಗಳು ಯಾವ ರೀತಿ ಇದೆ ಎನ್ನುವ ಬಗ್ಗೆ ಸ್ವಲ್ಪ ದಿವಸಗಳ ಹಿಂದೆ ಒಂದು ಪತ್ರಿಕೆಯಲ್ಲಿ ಬಂದಿತ್ತು ಮೊನ್ನೆ ಒಬ್ಬ ಶ್ರೀಮಂತರ ಮಗನನ್ನು ಅರೆಸ್ಟ್ ಮಾಡಿ ತೆಗೆದುಕೊಂಡು ಹೋದರು. ಏತಕ್ಕೆ ಅರೆಸ್ಟ್ ಮಾಡಿದರು ಅಂದರೆ, ಬ್ಯಾಂಕಿಗೆ ನುಗ್ಗಿದ ಪ್ರಕರಣದಲ್ಲಿ ಅವನು ಇದ್ದ. ಆತನನ್ನು ಕೇಳಿದಾಗ ನಾನು ಕಳ್ಳರ ಕಳ್ಳ ಸಿನಿಮಾ ನೋಡಿ ಈ ರೀತಿ ಮಾಡಿದೆ ಎಂದು ಹೇಳಿದಂತೆ. ಅಂತಹ ಸಿನಿಮಾಗಳಿಗೆಲ್ಲಾ ವಿನಾಯ್ತಿ ಕೊಟ್ಟಿರುವುದು ಇದೆ. ನಿಜವಾದಂಥ ಸಮಿತಿ, ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುವುದಾದರೆ ಇಂತಹ ವಿಚಾರಗಳ ಕಡೆ ಗಮನ ಕೊಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಭಾಷಣದಲ್ಲಿ ಒಂದು ಸುಂದರವಾದ ಮಾತನ್ನು ಹೇಳಿದ್ದಾರೆ. ಇನ್ನು ಮುಂದೆ ಕೊಡತಕ್ಕ ಅನುದಾನ ಏನಿದೆ, ಅದು ಕನ್ನಡ ನಾಡಿನಲ್ಲಿ ತಯಾರಾಗತಕ್ಕ ಚಲನ ಚಿತ್ರಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಅದು ಅಕ್ಷರಶಃ ಪಾಲನೆಯಾಗಬೇಕಾಗುತ್ತದೆ. ಅದೇ ರೀತಿ ಚಲನ ಚಿತ್ರಗಳಿಗೆ ರಿಯಾಯ್ತಿ ಕೊಟ್ಟು, ಕನ್ನಡ ನಾಡಿನಲ್ಲಿ ತಯಾರಾಗುವ ಪ್ರಿಂಟಿಂಗ್, ಸೌಂಡ್ ರೆಕಾರ್ಡಿಂಗ್, ಕಲರಿಂಗ್. ಎಲ್ಲದರಲ್ಲೂ ಕೂಡ ಸಮ್ಮ ಜನರಿಗೆ ಕೆಲಸ ಒದಗಿಸತಕ್ಕ ಸಂಸ್ಥೆಗಳನ್ನು ರಚನೆ ಮಾಡಿ, ಸಂಪೂರ್ಣವಾಗಿ ಇಲ್ಲಿ ತಯಾರಾಗುವಂತಹ ಆದಂ ಯಾವುದೇ ಭಾಷೆಯದ ಗಿರಲಿ. ಚಿತ್ರಗಳಿಗೆ ನೂರಕ್ಕೆ ಐವತ್ತರಷ್ಟು ವಿನಾಯ್ತಿ ಕೊಡಲಿಕ್ಕೆ ಅವಕಾಶ ಮಾಡಿಕೊಂಡಿರಬೇಕೆಂದು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಿ ಬಯಸುತ್ತೇನೆ.

೨–೩೦. ಪಿ. ಎಂ.

ಇದರ ಜೊತೆಗೆ ಪ್ರಶಸ್ತಿಯನ್ನು ಪಡೆದಂಥ ಯಾವುದೇ ಭಾಷೆಯ ಚಿತ್ರಗಳಿಗೂ ವಿನಾಯಿತಿಯನ್ನು ಕೊಡುವ ವ್ಯವಸ್ಥೆಯನ್ನು ತಾವು ಮಾಡಿದ್ದೀರಿ. ಇವತ್ತು ಕನ್ನಡ ಚಿತ್ರಗಳಿಗೆ ಕೊಡತಕ್ಕಂಥ ತೆರಿಗೆಗೂ ಬೇರೆ ಭಾಷೆಗಳ ಚಿತ್ರಗಳಿಗೆ ಕೊಡತಕ್ಕ ತೆರಿಗೆ ವಿನಾಯಿತಿಗೂ ದರ ಒಂದೇ ಇರುತ್ತದೆ. ೮ ಕೋಟಿ ರೂ. ವಿರ್ಚು ಮಾಡಿ ''ಗಜಿಯಾ ಸುಲ್ತಾನ'' ಮುಂತಾದ ಚಿತ್ರಕ್ಕೂ ಕೇವಲ ೨ ಲಕ್ಷದಲ್ಲೇ ತಯಾರು ಮಾಡತಕ್ಕ ಬುದು ಶೈಕ್ಷಣಿಕ ಚಿತ್ರಕ್ಕೂ ಒಂದೇ ರೀತಿಯ ತೆರಿಗೆಯ ವಿನಾಯಿತಿಯನ್ನು ಕೊಡುತ್ತಿದ್ದೀರಿ. ಇವು ಏಕೆ ? ನಮ್ಮ ಭಾಷೆಯ ಚಿತ್ರಗಳಿಗೂ ಹೊರಗಡೆಯಿಂದ ಬರತಕ್ಕ, ಪ್ರಶಸ್ತಿಯನ್ನು ಪಡೆಯದೇ ಇರತಕ್ಕ ಬೇರೆ ಭಾಷೆಯ ಚಿತ್ರಗಳಿಗೂ ತೆರಿಗೆ ವಿನಾಯಿತಿಯಲ್ಲಿ ವಿನಾದರೂ ಸ್ವಲ್ಪ ಪ್ರಯತ್ನ ಮಾಡಬೇಕು. ನಮ್ಮ ಚಿತ್ರಗಳಿಗೆ ೧ ಪರ್ಸೆಂಟ್ ತೆರಿಗೆ ಹಾಕಿದರೆ ಬೇರೆ ಭಾಷೆ ಚಿತ್ರಗಳಿಗೆ ೫ ಪರ್ಸೆಂಟ್ ತೆರಿಗೆ ಹಾಕಿ. ನಮ್ಮ ದೇಶದಲ್ಲಿ ಅದರಲ್ಲೂ ಕನ್ನಡ ನಾಡಿನಲ್ಲಿ ಎಲ್ಲ ಭಾಷೆಯ ಚಿತ್ರಗಳೂ ತಿಂಗಳು

ಗಟ್ಟಲೆ ನಡೆಯುತ್ತಿವೆ. ಆದರೆ ನಮ್ಮ ಕನ್ನಡ ಚಿತ್ರಗಳು ತಮಿಳ್ನಾಡಿನಲ್ಲಾಗಲಿ, ಮುಂಬಾಯಿ ನಗರದಲ್ಲಾಗಲಿ ಅಥವಾ ಬೇರೆ ಯಾವುದೇ ರಾಜ್ಯದಲ್ಲಾಗಲಿ ಒಂದು ತಿಂಗಳೂ ಕೂಡ ನಡೆಯುತ್ತಿಲ್ಲ. ಆದರೆ ಅದೇ ಬೇರೆ ಭಾಷೆಯ ಚಿತ್ರಗಳು ೬ ತಿಂಗಳು ೧ ವರ್ಷದವರೆಗೂ ನಡೆಯುತ್ತವೆ. ಇದನ್ನೆಲ್ಲಾ ಸರ್ಕಾರದವರು ಗುಮನಿಸಿ ನಮ್ಮ ಕನ್ನಡ ಚಿತ್ರಗಳಿಗೂ, ಬೇರೆ ಭಾಷೆಯ ಚಿತ್ರಗಳಿಗೂ ತೆರಿಗೆಯಲ್ಲಿ ವಿತಕ್ಕೆ ವ್ಯತ್ಯಾಸ ಮಾಡಬಾರದು ? ಈ ರೀತಿ ವ್ಯತ್ಯಾಸ ಮಾಡಿದರೆ ನಮ್ಮ ಕನ್ನಡ ಕಲಾವಿದರಿಗೆ ಒಂದು ರೀತಿಯ ಸಹಕಾರವನ್ನು ಕೊಟ್ಟಂತಾಗುತ್ತದೆ. ಬಡವರು ಕಡಿಮೆ ದರದಲ್ಲಿ ಚಿತ್ರಗಳನ್ನು ನೋಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಬೇರೆ ಭಾಷೆ ಚಿತ್ರಗಳಿಗಿಂತ ನಮ್ಮ ಕನ್ನಡ ಚಿತ್ರಗಳಿಗೆ ಶೇ. ೫೦ ಪರ್ಸೆಂಟ್‌ನಷ್ಟು ತೆರಿಗೆಯನ್ನು ವಿನಾಯಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ವೀಡಿಯೋ ಶೈಕ್ಷಣಿಕ ಚಿತ್ರಗಳಿಗೆ ತೆರಿಗೆ ವಿನಾಯಿತಿ ಕೊಟ್ಟಿದ್ದೀರಿ. ನಮ್ಮ ವಾರ್ತಾ ಕೇಂದ್ರದವರು ವೀಡಿಯೋ ಸೆಟ್‌ಗಳನ್ನು ಇಟ್ಟುಕೊಂಡು ಯಾವ ಯಾವ ಗ್ರಾಮಾಂತರ ಪ್ರದೇಶದಲ್ಲಿ ಮನರಂಜನೆ ಇಲ್ಲ ಅಂಥ ಕಡೆ ಕನ್ನಡ ಚಿತ್ರಗಳನ್ನು ತೋರಿಸಬೇಕು. ಸಾಧ್ಯವಾದರೆ ನಮ್ಮ ಈ ಸದನದ ಕಾರ್ಯಕಲಾಪಗಳನ್ನೂ ವೀಡಿಯೋ ಮುಖಾಂತರ ಪ್ರದರ್ಶನ ಮಾಡಿ ತೋರಿಸಿದರೆ ಇಲ್ಲಿ ಏನು ನಡೆಯುತ್ತದೆ, ಎಂಬುದು ನಮ್ಮ ಜನರಿಗೆ ಗೊತ್ತಾಗುತ್ತದೆ. ಆದರಿಂದ ರಾಜ್ಯದಲ್ಲಿ ಏನೇನು ಮಾರ್ಪಾಡಾಗುತ್ತದೆ ಎಂಬುದನ್ನು ಆನಂತರ ತಾವೇ ನೋಡಬಹುದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ವೀಡಿಯೋ ಇಡುವ ಪ್ರಯತ್ನ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ವೀಡಿಯೋ ಮುಖಾಂತರ ಶೈಕ್ಷಣಿಕ ಮಾರ್ಗದರ್ಶನ ಕೊಡುವಂಥ ಚಿತ್ರಗಳ ಪ್ರದರ್ಶನಗಳಿಗೆ ಸಂಪೂರ್ಣವಾಗಿ ತೆರಿಗೆ ವಿನಾಯಿತಿ ಮಾಡಬೇಕೆಂದು ಹೇಳಿ ಈ ಸೀಮಿತವಾದ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತೇನೆ

† ಶ್ರೀ ವಿ. ತಿಪ್ಪಯ್ಯ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೆ, ಈ ಮಸೂದೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಇದುವರೆಗೂ ಮಾತನಾಡಿದ್ದಾರೆ. ಅದೇ ರೀತಿ ನಾನೂ ಕೂಡ ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ದೇಶ ಕರಭಾರದ ದೇಶವೆನ್ನುವ ಹೆಸರನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸಿಂಗಲ್ ಪಾಯಿಂಟ್ ಟ್ಯಾಕ್ಸ್‌ನ್ನು ಹಾಕುವ ವ್ಯವಸ್ಥೆ ಮಾಡಬೇಕು.

ಇನ್ನು ಬಸ್ಸು, ಲಾರಿಗಳು ನ್ಯಾಷನಲ್ ಪರ್ಮಿಟ್ ತೆಗೆದುಕೊಂಡು ಪ್ರತಿ ದಿವಸ ಅನೇಕ ಟ್ರಿಪ್‌ಗಳನ್ನು ಓಡಿಸುತ್ತಿದ್ದಾರೆ. ಅವರಿಂದ ನೀವು ೩ ತಿಂಗಳಿಗೆ ಒಂದು ಸಾರಿ ತೆರಿಗೆಯನ್ನು ವಸೂಲಿ ಮಾಡಿಕೊಳ್ಳುತ್ತಿದ್ದೀರಿ. ಆದರೆ ಅವರು ಹೆಚ್ಚಿನ ಟ್ರಿಪ್‌ಗಳನ್ನು ಓಡಿಸುತ್ತಿರುವುದರಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತಿದೆ ಎಂಬುದನ್ನು ತಾವು ನೋಡಬೇಕು.

ಇನ್ನು ನಮ್ಮಲ್ಲಿ ರಿಕ್ರಿಯೇಷನ್ ಕ್ಲಬ್‌ಗಳಿಂದು ೧೪ ಇವೆ. ಇವುಗಳನ್ನು ನಡೆಸುವವರು ೫೦ ರೂ. ಫೀಸ್‌ನ್ನು ಕಟ್ಟಿ ಇಡೀ ರಾತ್ರಿಯೆಲ್ಲಾ ಕ್ಲಬ್‌ಗಳನ್ನು ನಡೆಸುತ್ತಿದ್ದಾರೆ. ಇದು ಮನರಂಜನೆಯಾಗುವುದಿಲ್ಲ. ಇವುಗಳು ದೊಡ್ಡ ಜೂಜಿನ ಕಟ್ಟೆಗಳಾಗಿರುವುದರಿಂದ ಇವುಗಳ ಮೇಲೆ ಸೂಕ್ತ ಹತೋಟಿಯನ್ನು ಇಟ್ಟುಕೊಳ್ಳಬೇಕೆಂದು ಸೂಚಿಸಿ ಬಯಸುತ್ತೇನೆ.

ಇನ್ನು ಮದುವೆಗಳ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಪ್ರತಿವರ್ಷ ೧೫–೨೦ ಸಾವಿರ ಮದುವೆಗಳು ಆಗುತ್ತಿರುತ್ತವೆ. ಈ ರೀತಿ ಮದುವೆಯಾಗುವವರು ಸಬ್ ರಿಜಿಸ್ಟ್ರಾರ್‌ರವರ ಕಛೇರಿಗೆ ಹೋಗಿ ೧೫–೨೦ರೂ. ಫೀಸ್‌ನ್ನು ಕೊಟ್ಟು ಮದುವೆಯಾಗುತ್ತಾರೆ ಅಂಥವರು ಸಂಪ್ರದಾಯದ ಪ್ರಕಾರ ಬೇಕಾದರೂ ಮದುವೆ ಮಾಡಿಕೊಳ್ಳಬಹುದು. ಇಲ್ಲವೇ ರಿಜಿಸ್ಟರ್ ಮದುವೆಯನ್ನು ಬೇಕಾದರೂ ಮಾಡಿಕೊಳ್ಳಬಹುದು ಎಂದು ನಿಯಮವನ್ನು ಮಾಡಬೇಕು. ಈ ರೀತಿ ಮಾಡುವುದರಿಂದ ನಮ್ಮ ಸರ್ಕಾರಕ್ಕೆ ಹಣ ಹೆಚ್ಚಿನ ರೀತಿಯಲ್ಲಿ ಬರುತ್ತದೆ.

ಇನ್ನು ಬಡವರು ಉಪಯೋಗಿಸತಕ್ಕ ವಸ್ತುಗಳ ಮೇಲೆ ಟ್ಯಾಕ್ಸ್‌ನ್ನು ಕಡಿಮೆ ಮಾಡಬೇಕು. ಈ ಟ್ಯಾಕ್ಸ್‌ನ್ನು ತಾವು ಕಡಿಮೆ ಮಾಡುವುದಾದರೆ ಬಡವರಿಗೆ ಸ್ವಲ್ಪ ಮಟ್ಟಿನ ತೆರಿಗೆಯ ಹೊರೆ ಕಡಿಮೆಯಾಗುತ್ತದೆ.

ಇನ್ನು ಮಾನ್ಯ ಸದಸ್ಯರಾದ ಗಂಗಾಧರಸ್ವಾಮಿಯವರು ಹೇಳಿದಂತೆ ಮನರಂಜನಾ ತೆರಿಗೆಯ ಬಗ್ಗೆ ಹೇಳುವುದಾದರೆ ಹೊರಗಿನಿಂದ ಬರತಕ್ಕ ಬೇರೆ ಭಾಷೆಯ ಚಿತ್ರಗಳಿಗೆ ಹೆಚ್ಚಿನ ತೆರಿಗೆಯನ್ನು ಹಾಕಿ ನಮ್ಮ

ಕನ್ನಡ ನಾಡಿನಲ್ಲೇ ತಯಾರಾಗತಕ್ಕ ಚಿತ್ರಗಳಿಗೆ ಸಾಧ್ಯವಾದಷ್ಟೂ ಕಡಿಮೆ ತೆರಿಗೆಯನ್ನು ಹಾಕಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ನಮ್ಮ ಕನ್ನಡ ಭಾಷೆಯ ಚಿತ್ರಗಳು ಹೊರದೇಶಗಳಿಗೆ ಹೋಗುತ್ತಿಲ್ಲ. ಆದರೆ ಹೊರ ದೇಶದ ಚಿತ್ರಗಳು ನಮ್ಮದೇಶಕ್ಕೆ ಬಂದು ವರ್ಷಗಟ್ಟಲೇ ನಡೆಯುತ್ತಿರುವುದರಿಂದ ಸರ್ಕಾರದವರು ಮನರಂಜನಾ ತೆರಿಗೆಯನ್ನು ಇವುಗಳ ಮೇಲೆ ಎಷ್ಟು ಪ್ರಮಾಣದಲ್ಲಿ ಹಾಕ ಬೇಕೆಂಬು ದನ್ನು ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ

† ಡಾ॥ ಬಿ. ಬಿ. ಶೆಟ್ಟಿ (ಬಹ್ಮಾವರ).—ಮಾನ್ಯ ಅಧ್ಯಕ್ಷರೆ, ತಮಗೆಲ್ಲಾ ಚೆನ್ನಾಗಿ ಗೊತ್ತಿರಬಹುದು. ನಮ್ಮಲ್ಲಿ ಯಕ್ಷಗಾನ, ಬಯಲಾಟ ಒಂದು ಒಳ್ಳೆಯ ಕಲೆಯಾಗಿ ನಡೆದುಬರುತ್ತಿದೆ. ಆದರೆ ಅದಕ್ಕೆ ಯಾವರೀತಿಯ ಪುರಸ್ಕಾರ ಸಿಕ್ಕುತ್ತಿದೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕೆ ರಬಯಸುತ್ತೇನೆ.

ಯಕ್ಷಗಾನ ಕಲೆ ಎಂದರೆ ಇದು ಮನರಂಜನಾ ಕಾರ್ಯವೂ ಹೌದು, ಮತ್ತು ಒಂದು ಧಾರ್ಮಿಕ ಪ್ರಚಾರವೂ ಹೌದು. ಆದರೆ ಇತ್ತೀಚೆಗೆ ತೆರಿಗೆಯ ವಿನಾಯಿತಿಯನ್ನು ತೆಗೆದುಕೊಳ್ಳುವ ಸಲುವಾಗಿ ಅಶ್ಲೀಲವಾದ ದೃಶ್ಯ ಮತ್ತು ಅಸಹ್ಯಕರವಾದ ಮಾತುಗಳನ್ನು ಸೇರಿಸಿ ಕಟ್ಟುಕತೆಯನ್ನು ಬರೆದು ನಮ್ಮ ಯಾವ ಪೀಳಿಗೆಯನ್ನು ತಪ್ಪುದಾರಿಗೆಳೆಯತಕ್ಕ ಕೆಲಸ ನಡೆಯುತ್ತಿದೆ. ಆದ್ದರಿಂದ ಇಂಥ ಅಶ್ಲೀಲ ದೃಶ್ಯ, ಕಟ್ಟುಕತೆಗಳಿಗೆ ತೆರಿಗೆಯನ್ನು ಹಾಕಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಇದರಿಂದ ತೆರಿಗೆ ನಮ್ಮ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರಲಿ ಎಂಬ ದೃಷ್ಟಿಯಿಂದ ಹೇಳುತ್ತಿಲ್ಲ. ಆದರೆ ಇಂಥ ಅಶ್ಲೀಲ ದೃಶ್ಯಗಳನ್ನು ಈ ಕಲೆಯಲ್ಲಿ ಸೇರಿಸುವುದನ್ನು ತಪ್ಪಿಸಬೇಕೆಂಬ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿ ಯವರಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ಮನರಂಜನಾ ತೆರಿಗೆಯನ್ನು ಹಾಕುವಾಗ ಎರಡು ರೀತಿಯ ತೆರಿಗೆಗಳನ್ನು ಹಾಕಬೇಕೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಅಂದರೆ ಕನ್ನಡ ಚಿತ್ರಗಳಿಗೇ ಒಂದು ರೀತಿಯ ತೆರಿಗೆ, ಬೇರೆ ಭಾಷೆಯ ಚಿತ್ರಗಳಿಗೇ ಒಂದು ರೀತಿಯ ತೆರಿಗೆಯಂತೆ. ಕನ್ನಡ ಭಾಷೆಗೆ ಮತ್ತು ಕನ್ನಡ ಚಿತ್ರಗಳಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ಈ ರೀತಿ ತೆರಿಗೆ ವಿನಾಯಿತಿಯನ್ನು ಕೊಡಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮ ದೇಶದಲ್ಲಿ ಇರತಕ್ಕ ಬೇರೆ ಬೇರೆ ಭಾಷೆಗಳೂ ಬೆಳೆಯಬೇಕೆಂಬ ಒಂದು ಮನೋಭಾವನೆ ಕೂಡ ನಮ್ಮಲ್ಲಿರಬೇಕು. ನಮ್ಮ ದೇಶ ಬೇರೆ ಬೇರೆ ಭಾಷೆಗಳನ್ನು ಒಳಗೊಂಡಿರತಕ್ಕ ರಾಷ್ಟ್ರ ಆರ್ಥಿಕ ಕ್ಷೇತ್ರದಲ್ಲೂ ಕೂಡ ನಾವು ಈ ರೀತಿ ಭಿನ್ನತೆಯನ್ನು ಮಾಡುವುದು ಒಳ್ಳೆಯದಾಗುವುದಿಲ್ಲ. ಆದರಲ್ಲೂ ಚಲನಚಿತ್ರಗಳನ್ನು ಹೆಚ್ಚಿನ ರೀತಿಯಲ್ಲಿ ತೋರಿಸುವಂಥ ಬೆಂಗಳೂರು, ಮೈಸೂರು, ಮಂಗಳೂರು, ಗುಲ್ಬರ್ಗಾ ಮುಂತಾದ ಕಡೆಗಳಲ್ಲಿ ಬೇರೆ ಬೇರೆ ಭಾಷೆಗಳನ್ನಾಡತಕ್ಕ ಜನರು ಅಲ್ಲಿರುವಾಗ ಇಂಥವರು ಇಂಥಾದ್ದೇ ಚಿತ್ರವನ್ನು ಇಂತಿಷ್ಟು ದಿವಸದವರೆಗೆ ನಡೆಸಬೇಕೆಂದು ಒತ್ತಾಯ ಮಾಡುವುದು ಸರಿಯಲ್ಲ. ಅವರ ಆ ರೀತಿಯ ಸಲಹೆ ರಾಷ್ಟ್ರದ ಬೆಳವಣಿಗೆಗೆ ಅಡ್ಡಿಯಾಗಬಹುದೆಂದು ಸ್ಪಷ್ಟವಾಗಿ ತಿಳಿಯುವುದರಿಂದ ಅವರ ಸಲಹೆ ಸಮಂಜಸವಾಗಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಮಾನ್ ರಾಮಚಂದ್ರರಾಯರ ವಾದವನ್ನು ನಾನು ಒಪ್ಪುವುದಿಲ್ಲ. ನ್ಯಾಷನಲ್ ಇಂಟಿಗ್ರೇಷನ್ ಬಗ್ಗೆ ಬೇರೆ ಬೇರೆ ಕಾರ್ಯಕ್ರಮಗಳನ್ನೂ ನಾವು ಇಟ್ಟುಕೊಂಡಿದ್ದೇವೆ. ನಮ್ಮ ಕನ್ನಡ ಚಿತ್ರಗಳಿಗೆ ಸಬ್ಸಿಡಿ ಕೊಡುವುದು ಅಥವಾ ತೆರಿಗೆ ವಿನಾಯಿತಿ ಮಾಡುವ ಉದ್ದೇಶ ಏನೆಂದರೆ ನಮ್ಮ ಕಲಾವಿದರು, ನಮ್ಮ ನಿರ್ಮಾಪಕರು ಯಾರಿದ್ದಾರೆ ಅವರಿಗೆ ಪ್ರೋತ್ಸಾಹ ಕೊಡಬೇಕೆಂಬ ಉದ್ದೇಶದಿಂದ. ಇದು ಬಿಟ್ಟು ಬೇರೆ ಯಾವುದೇ ತಾರತಮ್ಯವನ್ನೂ ನಾವು ಮಾಡುವುದಿಲ್ಲ. ಇಂಥ ಪದ್ಧತಿ ಬೇರೆ ರಾಜ್ಯಗಳಲ್ಲೂ ಇದೆ. ಅವರು ತಮ್ಮ ತಮ್ಮ ಭಾಷೆಯ.....

ಶ್ರೀ ಪಿ. ರಾಮಚಂದ್ರರಾವ್.—ಚಲನ ಚಿತ್ರಗಳಿಗೆ ತೆರಿಗೆಯನ್ನು ಹಾಕುವಾಗ ಎರಡು ರೀತಿಯ ತೆರಿಗೆಯನ್ನು ಹಾಕಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು.

ಶ್ರೀ ರಾಮಕೃಷ್ಣ ಹೆಗಡೆ.—ಅಂಥಾದ್ದು ಏನೂ ಇಲ್ಲ. ಇದು ಕೇವಲ ತೆರಿಗೆ ವಿನಾಯಿತಿ ಮಾತ್ರ. ಇದುವರೆಗೂ ನಡೆದುಕೊಂಡು ಬಂದಿರತಕ್ಕ ಪದ್ಧತಿ ಏನೆಂದರೆ ಕನ್ನಡ, ತುಳು, ಕೊಂಕಣಿ ಮತ್ತು ಕೊಡಗು ಭಾಷೆಗಳಲ್ಲಿ ತಯಾರಾದಂಥ ಚಿತ್ರಗಳಿಗೆ ಶೇ ೫೦ ಪರ್ಸೆಂಟ್ ತೆರಿಗೆ ವಿನಾಯಿತಿ ಸಿಕ್ಕುತ್ತಿದೆ.

ಎರಡನೆಯದೇನೆಂದರೆ ಯಾವುದಾದರೂ ಒಂದು ಒಳ್ಳೆಯ ಅವಾರ್ಡ್ ಗೆದ್ದಂಥ ಫಿಲಮ್ ಬಂದರೆ ಅದಕ್ಕೆ ಕೇವಲ ಮೂರು ವಾರ ಎಕ್ಸಮ್ಷನ್ ಕೊಡತಕ್ಕಂಥ ಪ್ರಾವಿಷನ್ ಈಗಿರತಕ್ಕಂಥ ಕಾಯಿದೆ ಪ್ರಕಾರ ಇದೆ. ಈಗ ಅದನ್ನು ತೆಗೆದು ನಾವು ಕನಿಷ್ಪಪಕ್ಷ ೬ ತಿಂಗಳು ಮಾಡಬೇಕೆಂದು ಇಟ್ಟು ಕೊಂಡಿದ್ದೇವೆ.

ಮೂರನೆಯದೇನೆಂದರೆ ಕನ್ನಡ ಕನ್ನಡೇತರ ಭಾಷಾ ಪಿಕ್ಚರ್‌ಗಳು ಬಂದರೆ, ಅಂದರೆ–ಮರಾಠಿ ಇರಲಿ, ಹಿಂದಿ ಇರಲಿ, ತಮಿಳು ಇರಲಿ, ತೆಲುಗು ಇರಲಿ, ಇಂಗ್ಲೀಷ್ ಇರಲಿ ಈಗಿರತಕ್ಕಂಥ ಕಾಯಿದೆ ಪ್ರಕಾರ ಯಾವುದೇ ಭಾಷೆಯಲ್ಲಿ ಎಜ್ಯುಕೇಷನಲ್ ವ್ಯಾಲ್ಯು ಇದೆ, ಸೋಷಿಯಲ್ ರಿಫಾರಮ್ ತೀಮ್ ಇದ್ದರೆ, ಅಥವಾ ಯಾವುದಾದರೂ ದೊಡ್ಡ ಪರಾಕ್ರಮ, ಹಿಸ್ಟಾರಿಕ್ ಕಥೆ. ಇವೇ ಮುಂತಾದ ಕಾರಣಗಳನ್ನು ಕೊಟ್ಟು ಟ್ಯಾಕ್ಸ್ ಎಕ್ಸಮ್ಷನ್ ಕೊಡಬೇಕೆಂದು ಸರ್ಕಾರವನ್ನು ಕೇಳಿದರೆ ಈಗಿರುವ ಪ್ರಕಾರ ಕಮಿಟಿ ಇದೆ. ಆ ಕಮಿಟಿಯವರು ಪಿಕ್ಚರ್ ನೋಡಿ ಅದಕ್ಕೆ ಒಪ್ಪಿಗೆ ಕೊಟ್ಟು ಟ್ಯಾಕ್ಸ್ ಎಕ್ಸಮ್ಷನ್ ಕೊಡಬೇಕೆಂದು ಹೇಳಿದರೆ ಮೂರು ವಾರದ ತನಕ ಕೊಡತಕ್ಕಂಥದ್ದು ಇರುತ್ತದೆ. ಇಲ್ಲಿ ಏನಾಗಿದೆ ಎಂದರೆ ಕಮಿಟಿಯಲ್ಲಿರತಕ್ಕಂಥ ನಮ್ಮ ಆಫೀಸರ್ ಏನು ಇದ್ದಾರೆ ಅವರಿಗೆ ೧೦–೧೫ ಚಿತ್ರಗಳು ಬರುತ್ತದೆಂದು ಇಟ್ಟುಕೊಂಡರೆ ಅವರು ಪುನಃ ಪುನಃ ಪಿಕ್ಚರ್ ನೋಡತಕ್ಕಂಥ ಕೆಲಸ. ಆದರೆ ಆ ಕೆಲಸವನ್ನು ರಿಜೆಕ್ಟ್ ಮಾಡಿದರೆ ಅನಾವಶ್ಯಕವಾಗಿ ಆಪಾದನೆ ಬರುತ್ತದೆ. ಸಕಾರಣವಾಗಿ ರಿಜೆಕ್ಟ್ ಮಾಡಲಿಲ್ಲ ಏನ್ನುವ ಫೆನ್ನಾಭಿಪ್ರಾಯ ಬರುತ್ತದೆ. ಆದ್ದರಿಂದ ಮುಂದೆ ಈ ಕಮಿಟಿಯೇ ಬೇಡ ಸರ್ಕಾರದವರು ಸಹ ಯಾವ ರೀತಿಯಾದ ಡಿಸ್‌ಕ್ರಿಮಿನೇಷನ್ ಇಟ್ಟುಕೊಳ್ಳುವುದು ಬೇಡವೆಂದು ಹೇಳಿ, ಯಾವುದೇ ಭಾಷೆಯ ಚಿತ್ರವಿರಲಿ, ಅದು ಪ್ರಾದೇಶಿಕವಾಗಿಸ್ಟಅವಾರ್ಡ್ ಗಳಿಸಿರಲಿ, ಅಥವಾ ರಾಷ್ಟ್ರೀಯ ಅವಾರ್ಡ್ ಗಳಿಸಿರಲಿ, ಯಾವುದೇ ಭಾಷೆಯ ಚಿತ್ರವಿರಲಿ.....

ಶ್ರೀ ಎಂ. ವಿಸ್. ಕೃಷ್ಣನ್.—ಯಾವುದೇ ಭಾಷೆಯ ಚಿಲ್ಡ್ರನ್ ಫಿಲಮ್‌ಗೆ...

ಶ್ರೀ ರಾಮಕೃಷ್ಣ ಹೆಗಡೆ —ಚಿಲ್ಡ್ರನ್ ಫಿಲಮ್ ಅದರ ಬಗ್ಗೆ ೬ ತಿಂಗಳು ಟ್ಯಾಕ್ಸ್ ಎಕ್ಸಮ್ಷನ್, ಕೊಟ್ಟರುತ್ತಾರೆ. ಕೆಲವು ಸಂದರ್ಭದಲ್ಲಿ ಕೊಟ್ಟಿರುತಾರೆ. ೧೩–೨೦ ವರ್ಷಗಳ ಹಿಂದೆ 'ಪತರ್ ಪಂಚಾಲಿ' ಅಂತ ಒಂದು ಫಿಲಮ್ ಬಂದಿತ್ತು ಅದಕ್ಕೆ ಅವಾರ್ಡ್ ಬಂದಿರುತ್ತದೆ. ಈಗಿನವರು ಅದನ್ನು ನೋಡಿರಲಾರರು. ಅದನ್ನು ಜನರು ನೋಡಬೇಕೆಂದು ಅದು ಯಾವುದೇ ಕಾಲದ್ದು ಇರಲಿ ಅವಾರ್ಡ್ ಫಿಲಮ್ ಇದ್ದರೆ ಅದಕ್ಕೆ ೬ ತಿಂಗಳ ಒಂದು ಟೈಮ್ ಕೊಡಬೇಕೆಂದು ಮಾಡಿದ್ದೇವೆ.

ಚಿಲ್ಡ್ರನ್ ಫಿಲಮ್ ಬಗ್ಗೆ ಡೈರೆಕ್ಟರ್ಸ್‌ಶಾಂತಾರಾಮ್‌ರವರು ಒಂದು ಪತ್ರವನ್ನು ಬರೆದಿದ್ದಾರೆ. ಅದು ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದಿರುವಂಥದ್ದು ಆದರ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ನಮಗೆ ಪತ್ರ ಬರೆದು ೪–೫ ತಿಂಗಳು ಆಗಿರುತ್ತದೆ. ಮಕ್ಕಳ ಬಗ್ಗೆ ವಿಶೇಷವಾಗಿ ತಯಾರಾಗಿರತಕ್ಕಂಥ ಚಿತ್ರ ಇರುತ್ತದೆ. ಆದರೆ ಈ ಚಿತ್ರಕ್ಕೆ ಮನರಂಜನಾ ತೆರಿಗೆಯನ್ನು ಹಾಕಿದರೆ ಅದನ್ನು ನೋಡತಕ್ಕಂಥದ್ದು ಕಷ್ಟವಾಗುತ್ತದೆ. ಆದ್ದರಿಂದ ಚಿಲ್ಡ್ರನ್ ಫಿಲಮ್‌ಗಳಿಗೆ ಕೇಂದ್ರ ಸರ್ಕಾರದ ಸೆಂಟ್ರಲ್ ಬೋರ್ಡ್‌ನವರು ಸರ್ಟಿಫೈ ಮಾಡಿದರೆ ಅದಕ್ಕೆ ಸಂಪೂರ್ಣವಾಗಿ ವಿನಾಯಿತಿ ಇದೆ.

ನಾಲ್ಕನೆಯದಾಗಿ ಎಜ್ಯುಕೇಷನ್ ಫಿಲಮ್ ಎಂದು ಮಾನ್ಯ ಗಂಗಾಧರನ್‌ರವರು ತಪ್ಪಾದೇ ಆದ ಶೈಲಿಯಲ್ಲಿ ಹೇಳಿದರು, ಹುಡುಗ ಹುಡುಗಿಯರನ್ನು ಹೊತ್ತು ಕೊಂಡು ಹೋಗಿ ಬದುಕಿಸಿದ್ದೂ ಕೂಡ ಒಂದು ಎಜ್ಯುಕೇಷನ್ ಫಿಲಮ್ ಎಂದು ಹೇಳಬೇಕಾಗುತ್ತದೆ ಎಂದು ಹೇಳಿದರು. ಇಲ್ಲಿ ಎಜ್ಯುಕೇಷನ್ ಫಿಲಮ್ ಎಂದು ತೀರ್ಮಾನ ಮಾಡತಕ್ಕಂಥವರು ಸೆಂಟ್ರಲ್ ಸೆನ್ಸಾರ್ ಬೋರ್ಡ್‌ನವರು, ಸೆಂಟ್ರಲ್ ಸೆನ್ಸಾರ್ ಬೋರ್ಡ್‌ನವರು ಇದು ಎಜ್ಯುಕೇಷನ್ ಫಿಲಮ್ ಎಂದು ಸರ್ಟಿಫೈ ಮಾಡಿದರೆ ಅದಕ್ಕೆ ಎಕ್ಸಮ್ಷನ್ ಕೊಡಬೇಕಾಗುತ್ತದೆ. ಇನ್ನು ಮುಂದೆ ಕನ್ನಡ ಚಲನಚಿತ್ರಗಳಿಗೆ ಈಗ ಸಿಕ್ಕತಕ್ಕಂಥ ಪ್ರತಿಯೊಂದು ಸಲಕತ್ತು ಮುಂದೆಯೂ ಸಿಕ್ಕುತ್ತದೆ. ಅದರ ಹೊರತಾಗಿ ಅವಾರ್ಡ್ ಗೆದ್ದಂಥ ಯಾವುದೇ ಫಿಲಮ್ ಇರಲಿ ಈಗಿರತಕ್ಕಂಥ ಮೂರು ವಾರಗಳ ಬದಲಾಗಿ ಆರು ತಿಂಗಳು ಸಿಕ್ಕುತ್ತದೆ. ಮಾನ್ಯ ಗಂಗಾಧರನ್‌ರವರು ಮತ್ತೊಂದು ವಿಚಾರವನ್ನು ಹೇಳಿದರು—ಬಜೆಟ್ ಬಗ್ಗೆ ಉಲ್ಲೇಖಿಸಿ. ಕರ್ನಾಟಕದಲ್ಲಿ ತಯಾರಾದಂಥ ಚಿತ್ರಗಳಿಗೆ ಪ್ರದರ್ಶನಕ್ಕೆ ಅನುಮತಿಯನ್ನು ಕೊಡಬೇಕೆಂದು ಸರ್ಕಾರದ ಉದ್ದೇಶವಿದೆಯೇ ಎಂದು ಕೇಳಿದ್ದಾರೆ. ಹೌದು ಉದ್ದೇಶ ಇದೆ. ಆದರೆ ಒಂದು ವಿಚಾರ ಹೇಳಿದೆ.

ಬಹುಶಃ ಒಂದು ವರ್ಷದಲ್ಲಿಯೇ ಅದನ್ನು ಬದಲಿಸುತ್ತೇವೆ. ಈವತ್ತು ನಮ್ಮ ಕರ್ನಾಟಕದಲ್ಲಿ ಒಳ್ಳೆಯ ಲ್ಯಾಬರೇಟರಿ ಇಲ್ಲ. ನಮ್ಮ ಸರ್ಕಾರದ ವತಿಯಿಂದ ಏನಾದರೂ ಲ್ಯಾಬರೇಟರಿ ಇದ್ದರೆ ಅದನ್ನು ಇಂಪ್ರೂವ್ ಮಾಡಿ ಸುದಾರಿಸಿ ಇಲ್ಲಿಯೇ ಎಲ್ಲ ರೀತಿಯ ಕಲರ್ ಫಿಲಮ್ ರೀ ರೆಕಾರ್ಡಿಂಗ್ ಎಲ್ಲ ಪ್ರತಿಯೊಂದು ಇಲ್ಲಿಯೇ ಆಗುವರೆಗೆ ಬೇರೆ ಕಡೆ ಪ್ರೊಡ್ಯೂಸ್ ಆದಂಥ ಕನ್ನಡ ಫಿಲಮ್‌ಗಳಿಗೆ ಟ್ಯಾಕ್ಸ್ ಎಕ್ಸಮ್‌ಷನ್ ಕೊಡಬೇಕಾಗುತ್ತದೆ. ಅಲ್ಲಿಯವರೆಗೆ ಬದಲಾವಣೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಏತಕ್ಕೆಂದರೆ ಎಲ್ಲಾ ಅನುಕೂಲವನ್ನು ಕೊಡುವವರೆಗೆ ಬೇರೆ ಕಡೆ ಹೋದರೆ ಅದನ್ನು ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ. ಕೊನೆಗೆ ಯಾರೋ ಮಾನ್ಯ ಸದಸ್ಯರು ಹೇಳಿದರು ಟಿಕೆಟ್‌ನು ತಾವೇ ಪ್ರಿಂಟ್ ಮಾಡಿಸಿ ಎಂಟರ್ ಟೈನ್‌ಮೆಂಟ್ ಟ್ಯಾಕ್ಸ್‌ನ್ನು ಕೊಡುವುದೇ ಇಲ್ಲ ಎಂದೆಲ್ಲ ಹೇಳಿದರಂ. ಇದರಿಂದ ತೊಂದರೆಯಾಗುತ್ತದೆ. ಬಹಳಷ್ಟು ಕೇಸ್‌ಗಳಲ್ಲಿ ಟಿಕೆಟ್ ಕೊಡುವುದೇ ಇಲ್ಲ, ದುಡ್ಡನ್ನು ವಸೂಲು ಮಾಡಿ ಸರ್ಕಾರಕ್ಕೆ ಯಾವರೀತಿಯ ಟ್ಯಾಕ್ಸನ್ನು ಕೊಡುವುದೇ ಇಲ್ಲ ಎಂದು ಕೆಲವರು ಹೇಳಿದರೂ ಇಲ್ಲ, ಅವರು ಯಾವುದೇ ರೀತಿಯಲ್ಲಿ ತೋರಿಸಿಕೊಳ್ಳಲಿ ಆದಕ್ಕೆ ನಾವು ಏನು ಮಾಡಬೇಕು. ಮಾನ್ಯ ಗಂಗಾಧರನ್‌ರವರು ನೋಡಿದ್ದರೆ ಅದರ ಬಗ್ಗೆ ತಿಳಿಸಿದ್ದರೆ ತಕ್ಷಣವೇ ಅವರ ವಿರುದ್ಧವಾಗಿ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಅವರು ಮನೆಯಲ್ಲೇ ಕುಳಿತು ನೋಡಲು ಅನುಕೂಲ ಮಾಡಬಹುದು, ರೂಮ್‌ನಲ್ಲಿ ಇಟ್ಟುಕೊಂಡು ಕೆಲವು ಜನರು ಕುಳಿತು ನೋಡಲು ಅನುಕೂಲ ಮಾಡಿರಬಹುದು ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಮಾನ್ಯ ಶೆಟ್ಟರು ಹೇಳಿದರು ಈಗ ಯಕ್ಷಗಾನದ ಹೆಸರಿನಲ್ಲಿ ಬಹಳಷ್ಟು ಅಶ್ಲೀಲತೆ ನಡೆಯುತ್ತಿದೆ ಎಂದು ನೆನಪು ಮಾಡಿಕೊಳ್ಳುತ್ತೇನೆ. ೧೫ ವರ್ಷಗಳ ಹಿಂದೆ ನಾನು ಇದೇ ಖಾತೆಗೆ ಸಂಬಂಧಪಟ್ಟ ಮಂತ್ರಿಯಾಗಿದ್ದಾಗ ಕೇವಲ ಸಿನಿಮಾ ಮತ್ತು ಹಾರ್ಸ್ ರೇಸ್‌ಗೆ ಇಪರೇಡನು ಬಿಟ್ಟರೆ ಬಾಕಿ ಎಲ್ಲ ಮನೆರಂಜನೆಗೂ ಕರವನ್ನು ಮೊಟಕು ಮಾಡಿದ್ದೇವು. ಅದು ನಾಟಕವೇ ಇರಲಿ, ಯಕ್ಷಗಾನವೇ ಇರಲಿ, ಸಂಗೀತ, ಬಯಲಂ ನಾಟಕ, ಲಲಿತಕಲೆ, ಇವು ಯಾವುದೇ ಇರಲಿ ಕೆಲಸ ಮಾಡುವವರಿಗೆ ಮನ ರಂಜನೆಗೋಸ್ಕರವಾಗಿ ಟ್ಯಾಕ್ಸ್ ಎಕ್ಸಮ್‌ಷನ್ ಕೊಡಬೇಕೆಂದು ಆ ಕಾಲದಲ್ಲಿಯೇ ತೆಗೆದು ಹಾಕಿದ್ದೆವು. ಅದಕ್ಕೂ ಮೊದಲು ನಾಟಕ ಮಾಡಿದ್ದರೂ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಕೊಡುತ್ತಿದ್ದರು.

ಯಕ್ಷಗಾನ ವಿಚಾರವನ್ನು ಪ್ರಸ್ತಾಪ ಮಾಡಿದರು, ಇದರಲ್ಲಿ ಅಶ್ಲೀಲತೆ ಇದೆ ಮತ್ತು ಜನರು ತಿರಸ್ಕಾರ ಮಾಡಿ ಇದನ್ನು ನೋಡುವುದಿಲ್ಲವೆಂದು ಹೇಳಿದರು. ಇದು ಜನತೆಯ ಒಂದು ತೀರ್ಮಾನಕ್ಕೆ ಬಿಟ್ಟರತಕ್ಕಂಥದ್ದು. ಇದನ್ನು ಯಾರು ತೀರ್ಮಾನ ಮಾಡಬೇಕು ? ಒಂದು ಪಕ್ಷ ಆಫೀಸರುಗಳು ಕುಳಿತುಕೊಂಡು ತೀರ್ಮಾನ ಮಾಡಿಸಿದರೆ, ಅವರು ಚೆನ್ನಾಗಿದೆ ಎಂದು ಹೇಳಬಹುದು. ಸೆನ್ಸಾರ್ ಬೋರ್ಡ್ ಅಶ್ಲೀಲತೆಯ ದೃಷ್ಯ ಇರಬಾರದೆಂದು. ಚೆನ್ಸಾರ್ ಮಾಡುತ್ತಾರೆ. ಕೆಲವು ಚಿತ್ರ ನೋಡಿದರೆ ನಮ್ಮ ಅಶ್ಲೀಲತೆ ಕಂಡು ಬರುವುದಿಲ್ಲ ಮತ್ತೆ ಕೆಲವು ಚಿತ್ರಗಳನ್ನು ನೋಡಿದರೆ ಬೇಕಾದಷ್ಟು ಕಂಡು ಬರುತ್ತೆದೆ.

ಶ್ರೀ ಎಂ. ಎಸ್. ಕೃಷ್ಣನ್.—ಯಾವುದು ಅಶ್ಲೀಲತೆ, ಯಾವುದು ಅಶ್ಲೀಲತೆಯಿಲ್ಲ, ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಅಭಿಪ್ರಾಯವೆಂದರೆ ಅಶ್ಲೀಲತೆ ಅದು ನೋಡುವವರ ಕಣ್ಣಲ್ಲಿ ಇರುತ್ತದೆ. ದೊಡ್ಡವರು ಹೇಳುತ್ತಾರೆ, ಸೌಂದರ್ಯ ನೋಡುವವರ ಕಣ್ಣಲ್ಲಿ ಇರುತ್ತದೆ ಎಂದು. ಅಶ್ಲೀಲತೆಯೂ ಕೂಡ ಅಷ್ಟೇ. ಯಾರು ಯಾರು ಯಾವ ಯಾವ ದೃಷ್ಟಿಯಲಿ ನೋಡುತ್ತಾರೊ ಆ ದೃಷ್ಟಿಯಲ್ಲಿ ಅದು ಕಾಣುತ್ತದೆ. ಈಗ ನಮ್ಮ ರಾಜ್ಯದಲ್ಲಿ ಶಾಶ್ವತವಾದಂಥ ಸಿನಿಮಾ ಮಂದಿರಗಳು, ಟೂರಿಂಗ್ ಟಾಕೀಸ್‌ಗಳು, ಸೆಮಿ- ಟೆಂಪರರಿ ಟಾಕೀಸ್‌ಗಳು ಸೇರಿ ಒಟ್ಟು ೧೧೨೪ ಇವೆ. ಇವುಗಳಲ್ಲಿ ೧೦೨ ಬೆಂಗಳೂರಿನಲ್ಲಿವೆ. ಇವುಗಳಿಗೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿಯನ್ನು ಇದರಲ್ಲಿ ಮಾಡಲಾಗಿದೆ. ಅದೇನೆಂದರೆ, ಇಲ್ಲಿಯವರೆಗೆ ೨೫ ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲಿರುವ ಥಿಯೇಟರ್‌ಗಳವರು ಕಾಂಪೌಂಡಿಗ್ ಮಾಡುವುದಕ್ಕೆ ಅವಕಾಶವಿತ್ತು. ಲೆಕ್ಕಪತ್ರಗಳನ್ನು ಇಡುವಂತಹ ತಾಪತ್ರಯವಿರಲಿಲ್ಲ. ಈ ಒಂದು ಅನುಕೂಲವನ್ನು ಈಗ ಒಂದು ಲಕ್ಷ ಜನಸಂಖ್ಯೆ ಇರುವಂತಹ ಪ್ರದೇಶಗಳಿಗೂ ಸಹ ವಿಸ್ತರಣೆ ಮಾಡಿದ್ದೇವೆ. ಇದರಿಂದ ಅಧಿಕಾರಿಗಳ ಕಿರುಕುಳ ಕಡಿಮೆಯಾಗುತ್ತದೆ ಮತ್ತು ಲೆಕ್ಕ ಪತ್ರಗಳನ್ನು

ಇಡುವಂತಹ ಕಷ್ಟವೂ ಸಹ ತಪ್ಪುತ್ತದೆ. ೧೧೨ಳಿ ಥಿಯೇಟರ್‌ಗಳ ಪೈಕಿ ೮೫೦ ಥಿಯೇಟರ್‌ಗಳಿಗೆ ಈ ಒಂದು ಅವಕಾಶ ಸಿಗುತ್ತದೆ. ಇನ್ನು ೨೭ಳಿ ಥಿಯೇಟರ್‌ಗಳವರು ಮಾತ್ರ ಲೆಕ್ಕಪತ್ರಗಳನ್ನಿಡಬೇಕಾಗುತ್ತದೆ. ಮಾನ್ಯ ಸದಸ್ಯರು ಮಾಡಿದಂಥ ಟೀಕೆಗಳಿಗೆಲ್ಲಾ ನಾನು ಉತ್ತರ ಕೊಟ್ಟಿದ್ದೇನೆ. ಆದ್ದರಿಂದ ಈ ತಿದ್ದುಪಡಿ ಮಸೂದೆಯನ್ನು ಈ ಮಾನ್ಯ ಸಭೆ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಸೆಕ್ಷನ್ ೩ (ಸಿ) ರಿಪ್ಲಿಕೈಡ್ ಮೀನಿಂಗ್ ಕೊಡುತ್ತದೆ. ಇಲ್ಲಿ ಏನು ಹೇಳಿದ್ದಾರೆಂದರೆ:—

(1) 'Section 3C of the principal Act shall be renumbered as sub-section (1) thereof and in sub-section (1) as so renumbered, in the proviso, for the words ''such film has secured an award granted by the Central Government or the State Government the words ''such film has secured after the first day of April, 1981, a best feature film award granted by the Central Government or any State Government or internationally recognised award notified by the State Government'' shall be substituted.

Now you please See the original Section 3 (c) which says :

'Not with standing any thing contained in section 3 and 3 A in the case of a cinematograph show of a Kannada, Kodava, Konkani of Tulu Film the rates of entertainments tax payable shall be one half of the rates specified there in :

Provided that where such film has secured an award granted by the Central Government or the State Government no entertainments tax shall be payable for a period of one year from such date as may be specified by the State Government'

The point I am trying to make out is it would apply only to feature films and internally recognised award films. The question here is why restrict it only to feature films ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಇದರಲ್ಲಿ ಮಾನ್ಯ ಕೃಷ್ಣನ್ ಅವರ ಅಭಿಪ್ರಾಯವನ್ನು ನಾನು ಸರಿಯಾಗಿ ಅರ್ಥ ಮಾಡಿಕೊಂಡಂತೆ ಅವರಿಗಿರುವ ಶಂಕೆ ಎಂದರೆ, ಈ ಅವಾರ್ಡ್ ಫಿಲಂಗಳಿಗೆ ೩ ವಾರದ ಸವಲತ್ತು ಏನಿತ್ತು, ಅದನ್ನು ತೆಗೆದಿದ್ದಾರೆ ಎಂದು. ಈಗ ಅವಾರ್ಡ್ ಡಾಕ್ಯುಮೆಂಟರಿ ಫಿಲಂಗಳಿಗೆ, ಫೀಚರ್ ಫಿಲಂಗಳಿಗೆ, ಮಕ್ಕಳ ಫಿಲಂಗಳಿಗೆ ಹಾಗೂ ಎಜುಕೇಟೆಡ್ ಫಿಲಂಗಳಿಗೆ ಅವಾರ್ಡ್ ಸಿಗಂತ್ತದೆ. ಇಲ್ಲಿ ಕೆಲವು ಚಿತ್ರಗಳಿಗೆ ಬೆಸ್ಟ್ ಪ್ರೊಡ್ಯೂಸರ್ ಎಂದು, ಇಲ್ಲವೇ ಬೆಸ್ಟ್ ಡೈಲಾಗ್ ಎಂದು ಇಲ್ಲವೇ ಬೆಸ್ಟ್ ಆಕ್ಟರ್ ಎಂದೂ, ಇಲ್ಲವೇ ಬೆಸ್ಟ್ ಮ್ಯೂಜಿಕ್ ಎಂದು ಅವಾರ್ಡ್ ಕೊಡಲಾಗುತ್ತದೆ. ಆದರೆ ಇಲ್ಲಿ ಬೆಸ್ಟ್ ಫೀಚರ್ ಫಿಲಂಗಳಿಗೆ ಏನು ಅವಾರ್ಡ್ ಬರುತ್ತದೆ, ಅಂಥಾದ್ದಕ್ಕೆ ಮಾತ್ರ ಇದು ಸೀಮಿತವಾಗಿರುತ್ತದೆ.

SRI M.S. KRISHNAN.—If it is made applicable to non-Kannada feature films, non-kodava, and non-Tulu films it is okay, but it is applicable to Kannada, Konkani, Tulu films. Why do you want to restrict the exemption in respect of Kannada films?

SRI RAMAKRISHNA HEGDE.—Every Kannada, Tulu, and Konkani film is entitled to get tax exemption to the extent of 50%. ಈಗ ಒಂದು ವೇಳೆ ಆ ತರಹದಿಂದ ನೋಡಿದರೆ ಏನಾಗುತ್ತದೆಂದರೆ, ಕೆಲವು ಫಿಲಂಗಳಿಗೆ ಬೆಸ್ಟ್ ಆ್ಯಕ್ಟರ್ ಎಂದು ಮತ್ತೆ ಕೆಲವು ಫಿಲಂಗಳಿಗೆ ಬೆಸ್ಟ್ ಸಪೋರ್ಟ್ ಆ್ಯಕ್ಟರ್ ಎಂದು, ಮತ್ತೆ ಕೆಲವು ಫಿಲಂಗಳಿಗೆ ಬೆಸ್ಟ್ ಮ್ಯೂಜಿಕ್ ಡೈರಕ್ಟರ್ ಎಂದು, ಮತ್ತೆ ಕೆಲವು ಫಿಲಂಗಳಿಗೆ ಒಳ್ಳೆಯ ಸಂವಾದ ಬರೆದಿದ್ದಾರೆಂದು ಅವಾರ್ಡ್ ಕೊಡುತ್ತಾರೆ. ಒಂದು ತರಹದಲ್ಲಿ ಇವೆಲ್ಲಾ ಅವಾರ್ಡ್ ಫಿಲಂಗಳೇ ಆಗುತ್ತವೆ. ಆದ್ದರಿಂದ ಇಲ್ಲಿ ರಿಯಾಯಿತಿ ಕೊಡುವಾಗ ಸ್ವಲ್ಪ ರಿಸ್ಟ್ರಿಕ್ಟ್ ಮಾಡಬೇಕೆಂಬುದು ನನ್ನ ಉದ್ದೇಶ. ಇದರ ಜೊತೆಗೆ ಕ್ವಾಲಿಟಿ ಇಂಪ್ರೂವ್ ಮಾಡಬೇಕೆಂದು ಕೆಲವರು ಹೇಳಿರುವುದರಿಂದ ಇಲ್ಲಿ ಈ ರೀತಿ ಮಾಡಿರುವುದು.

SRI M.S. KRISHNAN.—There is an amendment to section 4. You have given a table in respect of show-tax. According to the amendment you have raised the show-tax which indirectly affect the cinegoers.

ಶ್ರೀ ರಾಮಕೃಷ್ಣ ಹೆಗಡೆ —ಇಲ್ಲಿ ಷೋ ಟ್ಯಾಕ್ಸ್‌ನಲ್ಲಿ ಮಹತ್ವದ ಬದಲಾವಣೆ ಇಲ್ಲ. ಆದರೆ ವಿನ್ಸೆಂಟ್ ಕೃಷ್ಣನ್ ಆವರ ಕಣ್ಣು ಈ ಡ್ರೈವಿಂಗ್ ಥಿಯೇಟರ್ ಕಡೆಗೆ ಹೋಗಿದೆ. ಇಲ್ಲಿ ಸಿನಿಮಾ ನೋಡಲು ಕಾರಿನಲ್ಲಿ ಹೋಗುವವರು ಯಾರೆಂದರೆ, ಗಂಡಹೆಂಡತಿ, ಹುಡುಗ-ಹುಡುಗಿ, ಯಾರೋ ಗಂಡ ಯಾರೋ ಹೆಂಡತಿ ಹೋಗುತ್ತಾರೆ. ಇಲ್ಲಿ ಕಾರ್ ಪಾರ್ಕಿಂಗ್ ಮಾಡಲು ಇಷ್ಟು ಎಂದು ಟಿಕೇಟ್ ಮೂಲಕ ಚಾರ್ಜ್ ಮಾಡುತ್ತಾರೆ. ಈ ಚಾರ್ಜ್‌ನ್ನು ಕೊಡಲು ತಯಾರಿರುವವರು ಟ್ಯಾಕ್ಸ್ ಕೂಡ ಏತಕ್ಕೆ ಸರ್ಕಾರಕ್ಕೆ ಕೊಡಬಾರದು?

MR. DEPUTY SPEAKER.—Now I will put the consideration motion to the vote of the House. The question is :

"That the Karnataka Entertainments Tax (Second Amendment) Bill, 1983 be taken in to consideration"

The motion was adopted.

CLAUSE BY CLAUSE CONSIDERATION

MR. DEPUTY SPEAKER.—As the are no amendments, I will put Clauses 2 to 13 to the vote of the House. The Question is :

"That Clauses 2 to 13 both inclusive do stand part of the Bill"

The motion was adopted.

(Clauses 2 to 13 both inclusive were added to the Bill.)

Clause 1 etc.,

MR. DEPUTY SPEAKER.—The question is:

"That Clause-1, the long title, the preamble, and the enacting formula do stand part of the bill"

The motion was adopted

(Clause, 1 the long title, the preamble and the enacting formula were added to the bill.)

Motion To Pass

SRI RAMAKRISHNA HEGDE.—Sir, I move:

"That the Karnataka Entertainments Tax (Second Amendment) Bill, 1983 be passed"

MR. DEPUTY SPEAKER.—The question is:

"That the Karnataka Entertainments Tax (Second Amendment) Bill, 1983 be passed"

The motion was adopted and the Bill was passed.

P.M. 3-00

THE KARNATAKA TAX ON PROFESSIONS, TRADES, CALLINGS AND EMPLOYMENTS (AMENDMENT) BILL, 1983.

Motion to consider

SRI RAMAKRISHNA HEGDE (Chief Minister).—Sir, beg to move.

"That the Karnataka Tax on Proffessions, Trades, Callings and Employments (Amendment) Bill, 1983

The question was proposed

ಉಪಾಧ್ಯಕ್ಷರು—ಮಾನ್ಯ ಮಂತ್ರಿಯವರು ಈ ಅಮೆಂಡ್‌ಮೆಂಟ್ ಬಗ್ಗೆ ವಿವರಣೆ ಕೊಡಬಹುದು.

ಶ್ರೀ ರಾಮಕೃಷ್ಣ ಹೆಗಡೆ—ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಚಿಕ್ಕ ಅಮೆಂಡ್‌ಮೆಂಟ್ ಇದರಲ್ಲಿರತಕ್ಕದು ಇಷ್ಟೆ, ಹೋದವರ್ಷ ಓಟ್ ಆನ್ ಅಕೌಂಟ್ ಮೇಲೆ ಚರ್ಚೆಯಾದ ಸಂದರ್ಭದಲ್ಲಿ ಮಾನ್ಯ ಸದಸ್ಯರೊಬ್ಬರು ಒಂದು ಸೂಚನೆ ಮಾಡಿದರು. ಪ್ರೊಫೆಶನಲ್ ಟ್ಯಾಕ್ಸ್ ಹಾಕುವಾಗ, ಯಾರಿಗೆ ನಿರ್ದಿಷ್ಟವಾಗಿ ಸಂಬಳ ಬರುತ್ತದೆ ಅಂತಹವರಲ್ಲಿ ನಾಲ್ಕನೇ ದರ್ಜೆಯ ಸರ್ಕಾರಿ ನೌಕರರೂ ಇದ್ದಾರೆ. ಹೆಚ್ಚಾಗಿ ಪಬ್ಲಿಕ್ ಸೆಕ್ಟಾರ್‌ನಲ್ಲಿರತಕ್ಕವರು, ಕಾರ್ಖಾನೆ ನೌಕರರು ಇವರೆಲ್ಲರಿಗೂ ಇದರಿಂದ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಯಾರಿಗೆ ೧೫೦೦ ರೂಪಾಯಿಗಳವರೆಗೆ ತಿಂಗಳ ಸಂಬಳ ಬರುತ್ತದೆ ಅಂತಹವರಿಗೆ ಪ್ರೊಫೆಶನಲ್ ಟ್ಯಾಕ್ಸ್ ಕಡಿಮೆ ಮಾಡುತ್ತೇವೆಂದು ಹೇಳಿದ್ದೇವೆ. ಲೆಕ್ಕಹಾಕುವಾಗ ಅನೇಕ ತರಹದ ತಪ್ಪು ತಿಳುವಳಿಕೆಗಳಿಗೆ ಅವಕಾಶವಾಯಿತು. ಆದ್ದರಿಂದ ನಿರ್ದಿಷ್ಟವಾಗಿ ಯಾರಿಗೆ ತಿಂಗಳಿಗೆ ೧೫೦೦ ರೂಪಾಯಿಗಳಿಗಿಂತ ಹೆಚ್ಚು ಪರಮಾನವಿಲ್ಲವೋ ಅಂತಹವರಿಗೆ ಪ್ರೊಫೆಶನಲ್ ಟ್ಯಾಕ್ಸ್ ಹಾಕಬಾರದೆಂದು ಹೇಳುವುದು ಸರಿ. ಬೇಸಿಕ್ ಪೇ ಡಿ.ಎ. ಅಲೋಯೆನ್ಸಸ್ ಎಲ್ಲಾ ಸೇರಿದರೂ ಕೂಡ ತಿಂಗಳಿಗೆ ೧೫೦೦ ರೂಪಾಯಿಗಳಿಗಿಂತ ಹೆಚ್ಚು ಪರಮಾನವಿಲ್ಲವೋ ಅಂತಹವರಿಗೆ ಪ್ರೊಫೆಶನಲ್ ಟ್ಯಾಕ್ಸ್ ತೆಗೆಯಬೇಕೆಂದು ಹೇಳತಕ್ಕದ್ದು ಸರಿಯಾಗಿದೆ. ಆಮೇಲೆ ಮಾನ್ಯ ಎಂ.ಎಸ್. ನಾರಾಯಣರಾವ್‌ರವರ ಒಂದು ಸೂಚನೆ ಮಾಡಿದರು. ಅವರು ಕೂಡ ವಕೀಲರೆಲ್ಲರಿಗೂ ಸರಿಯಾದ ಪ್ರಾಕ್ಟೀಸ್ ಇಲ್ಲ ಈಗ ವಕೀಲರುಗಳಿಗೆ ಪ್ರಾಕ್ಟೀಸ್ ಪ್ರಾರಂಭ ಮಾಡಿದ ೭ ವರ್ಷಗಳವರೆಗೆ ಪ್ರೊಫೆಶನಲ್ ಟ್ಯಾಕ್ಸ್ ಎಕ್ಸಮ್‌ಷನ್ ಕೊಟ್ಟಿದ್ದಾರೆ. ೭ ವರ್ಷಗಳಲ್ಲಿಪ್ರಾಕ್ಟೀಸ್ ಪಿಕಪ್ ಆಗುವುದಿಲ್ಲ ಆದ್ದರಿಂದ ಕನಿಷ್ಟಪಕ್ಷ ೧೦ ವರ್ಷಗಳವರೆಗೆ ಪ್ರೊಫೆಶನಲ್ ಟ್ಯಾಕ್ಸ್ ಎಕ್ಸಮ್‌ಷನ್ ಕೊಡಬೇಕೆಂದು ಬಾರ್ ಅಸೋಸಿಯೇಷನ್‌ರವರ ಅಭಿಪ್ರಾಯ ವಿದೆಯೆಂದು ನಾರಾಯಣರಾವ್‌ರವರು ನನಗೆ ಹೇಳಿದರು. ಅನೇಕ ವಕೀಲರುಗಳು ಕೂಡ ಈವಿಚಾರವಾಗಿ ನನನ್ನು ಭೇಟಿಯಾಗಿದ್ದರು. ಈಗ ೭ ವರ್ಷಗಳಿಂದ ೧೦ ವರ್ಷಗಳಿಗೆ ಏರಿಸಿದ್ದೇವೆ. ಇದರಲ್ಲಿ ರಿಲೀಫ್ ಕೊಟ್ಟಿರತಕ್ಕದ್ದು ವೇಜ್ ಅರ್ನರ್ಸ್ ಅವರುಗಳಿಗೆ ತಿಂಗಳಿಗೆ ೧೫೦೦ ರೂಪಾಯಿ ಯಾರಿಗೆ ಸಂಬಳ ಬರುತ್ತದೆ ಅವರಿಗೆ ಪ್ರೊಫೆಶನಲ್ ಟ್ಯಾಕ್ಸ್ ಎಕ್ಸಮ್‌ಷನ್ ತೋರಿಸಿದ್ದೇವೆ. ಅದರ ಪ್ರಕಾರ ೪ ಲಕ್ಷದ ೧೬ಸಾವಿರ ಜನರಿಗೆ ಇದರಿಂದ ಲಾಭವಾಗುತ್ತದೆ. ಡೀಲರ್ಸ್ ೪೦ ಸಾವಿರ ರೂಪಾಯಿಗಳ ವರೆಗೆ ಟರ್ನ್‌ಓವರ್ ಇದ್ದರೆ ಅಂತಹವರಿಗೆ ಸೇಲ್ಸ್‌ಟ್ಯಾಕ್ಸ್ ಎಕ್ಸಮ್‌ಷನ್ ಮಾಡಿದ್ದೇವೆ. ಡೀಲರ್ಸ್‌ಗಳಿಗೂ ಇದನ್ನೆ ಅನುಸರಿಸುತ್ತೇವೆ. ಆದ್ದರಿಂದ ಇದನ್ನು ಮಾನ್ಯ ಸದಸ್ಯರು ತುಂಬಿದ ಹೃದಯದಿಂದ ಸ್ವಾಗತ ಮಾಡುತ್ತಾರೆಂದು ನಾನು ಆಶಯ ಮಾಡುತ್ತೇನೆ.